ಉದ್ದೇಶಿಸಲಾಗಿದೆ. ಆದರೆ 2014–15ನೇ ಸಾಲಿನ ಪ್ರಥಮ ಹಂತದಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ

3847(4624); ಶ್ರೀ. ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ನಿಪ್ಪಾಣಿ ನಗರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಯಾವ ಸ್ಥಳದಲ್ಲಿ ನಡೆಯುತ್ತಿದೆ, ಎಷ್ಟು ವರ್ಷಗಳಿಂದ ನಡೆಯುತ್ತಿದೆ;

ಆ) ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡಕ್ಕೆ ಎಷ್ಟು ಅನುದಾನ ಮಂಜೂರಾಗಿದೆ, ಯಾವಾಗ ಮಂಜೂರಾಗಿದೆ;

ಇ) ಮಂಜೂರಾಗಿ ಹಲವು ತಿಂಗಳುಗಳು ಕಳೆದರೂ ಕೂಡಾ ಈವರೆಗೆ ಕಟ್ಟಡದ ಕಾಮಗಾರಿಯು ಆರಂಭಿಸದಿರುವುದಕ್ಕೆ ಕಾರಣವೇನು;

ಈ) ಈ ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದೆಯೇ, ಯಾವಾಗ ಸಲ್ಲಿಸಲಾಗಿದೆ ಮತ್ತು ಅಂದಾಜು ಮೊತ್ತ ಎಷ್ಟು;

ಉ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ನಿಪ್ಪಾಣಿ ನಗರದಲ್ಲಿ ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಬಾಡಿಗೆ ಕಟ್ಟಡದಲ್ಲಿ ದಿ:2–10–2008 ರಲ್ಲಿ ಪ್ರಾರಂಭಿಸಲಾಗಿದೆ. ವಸತಿ ಶಾಲೆಯು 6 ವರ್ಷಗಳಿಂದ ನಡೆಯುತ್ತಿದೆ. ಚಿಕ್ಕೋಡಿ ತಾಲ್ಲೂಕಿನ ಜತ್ರಾತ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪುಷ್ಕರಾಜ್ ತಾರಳೆ ಇವರ ಮಾಲೀಕತ್ವದ ವಿ.ಪಿ.ಸಿ. 664 ರ ಬಾಡಿಗೆ ಕಟ್ಟಡಕ್ಕೆ ದಿನಾಂಕ: 28–03–2011 ರಿಂದ ಸ್ಥಳಾಂತರಿಸಲಾಗಿದೆ.

ಆ) ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಪದವಿ ಪೂರ್ವ ವಸತಿ ಕಾಲೇಜುಗಳನ್ನು ನಿರ್ಮಿಸಲು 2014–15ನೇ

ಸಾಲಿಗೆ ಲೆಕ್ಕಶೀರ್ಷಿಕೆ:4225–02–277–2–04 (386) ರಲ್ಲಿ ₹ 33.97 ಕೋಟಿ ಅನುದಾನ ನಿಗಧಿಯಾಗಿದೆ.

ಇ) ಈ ಕಟ್ಟಡಕ್ಕೆ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ರವರು ಚಿಕ್ಕೋಡಿ ತಾಲ್ಲೂಕಿನ ಗವಾಣ ಗ್ರಾಮದ ರಿ ಸ ನಂ 40/1 ರಲ್ಲಿ 6 ಎಕರೆ ಜಮೀನನ್ನು ವರ್ಗಾಯಿಸಿ ದಿನಾಂಕ: 05–10–2013 ರಂದು ಮಂಜೂರಾತಿ ಮಾಡಿರುತ್ತಾರೆ.

ತಾಂತ್ರಿಕ ಸಲಹೆಗಾರರು ₹ 9.05 ಕೋಟಿಗಳಿಗೆ ಅಂದಾಜು ತಯಾರಿಸಿ– ಸಲ್ಲಿಸಿದ್ದು, ಸದರಿ ಅಂದಾಜು ಪಟ್ಟಿಯನ್ನು ಪರಿಶೀಲಿಸಲಾಗುತ್ತಿದೆ.

ಈ) ಮತ್ತು ಉ) ಅಂದಾಜು ಪಟ್ಟಿ ಪರಿಶೀಲಿಸಿ, ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಇ–ಪೋರ್ಟಲ್ ಮೂಲಕ ಟೆಂಡರ್ ಕರೆದು ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು.

ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿಸುವುದು

3848(4710); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್

ಅ) 2011ನೇ ಜನಗಣತಿಯನ್ನು ಆಧರಿಸಿ, ರಾಜ್ಯದ ವಿವಿಧ ಗ್ರಾಮಗಳಲ್ಲಿ ಜೈನ ಜನಾಂಗಕ್ಕೆ ಸೇರಿದ ಜನಸಂಖ್ಯೆ ಎಷ್ಟು (ವಿಧಾನಸಭಾ ಮತಕ್ಷೇತ್ರವಾರು / ಗ್ರಾಮಗಳವಾರು ಮಾಹಿತಿ ನೀಡುವುದು);

ಆ) ಪ್ರಸ್ತುತವಾಗಿ ರಾಜ್ಯದಲ್ಲಿ ಜೈನ್ ಜನಾಂಗಕ್ಕೆ ಸೇರಿದವರನ್ನು ಯಾವ ವರ್ಗಕ್ಕೆ ಸೇರಿಸಲಾಗಿದೆ;

ಇ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಜೈನ್ ಜನಾಂಗದವರನ್ನು "ಅಲ್ಪ ಸಂಖ್ಯಾತರ" ವರ್ಗದ ಜನಾಂಗಕ್ಕೆ ಸೇರ್ಪಡಿಸುವ ಉದ್ದೇಶ ಸರಕಾರಕ್ಕೆ ಇದೆಯೇ; ಇದ್ದಲ್ಲಿ, ಈವರೆಗೂ ರಾಜ್ಯ ಸರ್ಕಾರವು ಅದನ್ನು ಕಾರ್ಯರೂಪಕ್ಕೆ ತರದೇ ಇರುವುದಕ್ಕೆ ಕಾರಣಗಳೇನು;